


International Journal of Kannada Research
www.kannadajournal.com

**ISSN: 2454–5813**
IJKR 2020; 6(2): 84-86
© 2020 IJKR
www.kannadajournal.com
Received: 09-02-2020
Accepted: 12-03-2020

**ಡಾ. ಬಿಳಿಗಿರಿ ಎನ್**
ಅತಿಥಿ ಉಪನ್ಯಾಸಕರು
ಇತಿಹಾಸ ವಿಭಾಗ, ಮೈಸೂರು,
ಕರಣಾಟಕ, ಭಾರತ

**Corresponding Author:**
**ಡಾ. ಬಿಳಿಗಿರಿ ಎನ್**
ಅತಿಥಿ ಉಪನ್ಯಾಸಕರು
ಇತಿಹಾಸ ವಿಭಾಗ, ಮೈಸೂರು,
ಕರಣಾಟಕ, ಭಾರತ

# ಮೈಸೂರು ಸಂಸ್ಥಾನದಲ್ಲಿ ನಡೆದ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲಿ ಮೇಲ್ವರ್ಗದವರ ಪಾತ

**ಡಾ. ಬಿಳಿಗಿರಿ ಎನ್**

ಅಸ್ಪೃಶ್ಯತಾ ಆಚರಣೆಯು ಹಿಂದೂ ಧರ್ಮಕ್ಕೆ ಅಂಟಿದ ಶಾಪ. ಅಸ್ಪೃಶ್ಯತೆಯು ನಿರ್ಮೂಲನೆಯಾಗದ ಹೊರತು ಸ್ವರಾಜ್ಯ ಸಾಧಯವಿಲ್ಲ. ಮಾನವ ಎಂದಿನವರೆಗೂ ಮಾನವೀಯತೆಯನ್ನು ಅರಿಯದೆ ಈ ಪಾಪವನ್ನು ಮುಂದುವರೆಸುತ್ತಾನೂ ಅಂದಿನವರೆಗೂ ನಾವು ಸ್ವತಂತ್ರರಾಗಿಯೂ ಪರತಂತ್ರರು ಎಂಬುದನ್ನು ಮನಗಂಡ ಗಾಂಧಿಜೀಯವರು ಮೈಸೂರು ಸಂಸ್ಥಾನದಾದ್ಯಂತ ಅಸ್ಪೃಶ್ಯತಾ ನಿವಾರಣೆಗಾಗಿ ಒಂದು ಯುದ್ಧವನ್ನೇ ಸಾರಿದರು. ತಮ್ಮ ರಾಷ್ಟ್ರನಿರ್ಮಾಣ ಚಟುವಟಿಕೆಗಳಲ್ಲಿ ಈ ಅಂಶವನ್ನು ಸೇರಿಸಿ ಇದರ ಉದ್ಧಾರಕ್ಕಾಗಿ ಜನತೆಯನ್ನು ಸಂಘಟಿಸಿದರು [1]. ಹಾಗೂ ಹಿಂದೂ ಧರ್ಮದಲ್ಲೇ ಜನಿಸಿದ್ದರೂ ಅಸ್ಪೃಶ್ಯರಿಗೆ ಹಿಂದೂ ದೇವಾಲಯಗಳಿಗೆ ಪ್ರವೇಶಾವಕಾಶಿಲ್ಲದಿರುವುದನ್ನು ಕಟುವಾಗಿ ಟೀಕಿಸಿದ್ದರಲ್ಲದೇ ತಮ್ಮ ಅನುಯಾಯಿಗಳ ಮೂಲಕ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಕಲ್ಪಿಸಲು ದೇಶಾದಾದ್ಯಂತ ನೂತನ ಹಾಗೂ ತೀವ್ರತರವಾದ ಚಳುವಳಿಯನ್ನು ಹಮ್ಮಿಕೊಂಡರು ಅದರ ಫಲವಾಗಿ ಮೈಸೂರು ಸಂಸ್ಥಾನದಲ್ಲಿಯೂ ಸಹ ಚಳುವಳಿ ಆರಂಭಗೊಂಡು ಕಾಲಕ್ರಮೇಣ ತೀವ್ರಗೊಂಡಿತು. ಅದರಲ್ಲಿ ಮೇಲ್ವರ್ಗದವರು ಹೆಚ್ಚಾಗಿ ಶ್ರಮಿಸಿದ್ದಾರೆ ಅವರಲ್ಲಿ ತಗಡೂರು ರಾಮಚಂದ್ರರಾಯರು, ಗೋಪಾಲಸ್ವಾಮಿ ಅಯ್ಯರ್, ಕೆ.ಟಿ ಭಾಷ್ಯಂ, ಪಿ. ಆರ್ ರಾಮಯ್ಯ, ಟಿ.ಟಿ ಶರ್ಮ, ಸಿದ್ದಪ್ಪ, ಕೆ ಚಂಗಲರಾಯರೆಡ್ಡಿ, ಎಂ.ಸಿ ಮಲ್ಲಪ್ಪ, ಬಿ.ಆರ್ ಶಾಮಐತಾಳ್ ಮತ್ತು ಹೆಚ್.ಸಿ ದಾಸಪ್ಪ ಹಾಗೂ ಮೇಲ್ವರ್ಗದ ಮಹಿಳೆಯರು ಮುಂತಾದವರು ಹರಿಜನರಿಗೆ ದೇವಾಲಯ ಪ್ರವೇಶ ಮಾಡಿಕೊಡುವಲ್ಲಿ ಯಶಸ್ವಿಯಾದರು ಪ್ರವೇಶ ಮಾಡಿಕೊಡುವಲ್ಲಿ ಯಶಸ್ವಿಯಾದರು [2].

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳವಳಿಯಲ್ಲಿ ತಗಡೂರು ರಾಮಚಂದ್ರರಾಯರ ಪ್ರಯತ್ನ ಅವಿಸ್ಮರಣೀಯವಾದದ್ದು, ಇವರು 1932ರ ಡಿಸೆಂಬರ್ 4ರಂದು ಮೈಸೂರು ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡುವುದಾಗಿ ಪತ್ರಿಕೆ ಹೇಳಿಕೆಯೊಂದರಲ್ಲಿ ತಿಳಿಸಿದರು. ತಾವು ಪ್ರಕಟಿಸಿದ ದಿನದಂದು ರಾಮಚಂದ್ರರಾಯರು ಹಲವು ಅಸ್ಪೃಶ್ಯರೊಡಗೂಡಿ ಶ್ರೀಕಂಠೇಶ್ವರ ದೇವಾಲಯಕ್ಕೆ ಒಳಪ್ರವೇಶಿಸುವ ಮುನ್ನ ದೇವಾಲಯದ ಹೊರ ಪ್ರದಕ್ಷಿಣೆ ಮಾಡುತ್ತಿದ್ದಂತಹ ಸಮಯದಲ್ಲಿ ಹಲವು ಸವರ್ಣಿಯರು ಅವರ ಮೇಲೆ ಸಗಣಿಯನ್ನು ಮತ್ತು ಕಲ್ಲುಗಳನ್ನು ಎರಚಿ ಹೊಡೆದು ಹಿಂಸೆಗೀಡು ಮಾಡಿದರು. ಇದರಿಂದ ರಾಮಚಂದ್ರರಾಯರ ತಲೆಗೆ ಪೆಟ್ಟು ಬಿದ್ದು ರಕ್ತಸ್ರಾವವಾಗತೊಡಗಿತು. ಇದರಿಂದ ದೇವಾಲಯ ಪ್ರವೇಶ ದೊರಕಿಸಿ ಕೊಡುವ ಪ್ರಯತ್ನ ವಿಫಲಗೊಂಡು ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚೆಗೀಡಾಯಿತು. ಆದರೆ ಅನುಮತಿ ದೊರೆಯಲಿಲ್ಲ [3].

ಮೈಸೂರು ಸರ್ಕಾರದ ಈ ನಿಲುವಿನಿಂದ ಬೇಸರಗೊಂಡ ರಾಮಚಂದ್ರರಾಯರು ಅಸ್ಪೃಶ್ಯರಿಗಾಗಿಯೇ ತಗಡೂರಿನಲ್ಲಿ 13–10–1933 ರಂದು ಪ್ರತ್ಯೇಕ ಗಣಪತಿ ದೇವಾಲಯ ವೊಂದನ್ನು ಕಟ್ಟಿಸಿ ಅವರು ಪೂಜಾ ಕೈಂಕರ್ಯ ನಡೆಸಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟರು. ಗಾಂಧೀಜಿಯವರು ನಂಜನಗೂಡಿಗೆ ಭೇಟಿ ನೀಡಿದ ಸಂದರ್ಭದಲ್ಲಿ ದೇವಾಲಯಕ್ಕೆ ಅವಕಾಶ ಮಾಡಿಕೊಡಿ ಎಂದು ಪರಿಶಿಷ್ಟ ಜಾತಿಯ ಜನರನ್ನು ದೇವಸ್ಥಾನದ ಒಳಕ್ಕೆ ಬಿಡುವ ಏರ್ಪಾಡು ಆಗಬೇಕೆಂದು, ಆ ಜನಗಳನ್ನು ಸವರ್ಣಿಯರು ಸಂಪೂರ್ಣವಾಗಿ ಸಂಪರ್ಕಕ್ಕೆ ತಂದುಕೊಳ್ಳದೇ ಹೋದರೆ ಹಿಂದೂ ಧರ್ಮವೇ ನಾಶ ಹೊಂದುವುದೆಂದೂ ಎಚ್ಚರಿಕೆ ನೀಡಿದರು. ಗಾಂಧೀಜಿಯವರ ಈ ಕರೆಯಿಂದ ಸ್ಫೂರ್ತಿಗೊಂಡ ಜನರು ಅಸ್ಪೃಶ್ಯರ ದೇವಾಲಯ ಪ್ರವೇಶ ಚಳವಳಿಯನ್ನು ಮತ್ತಷ್ಟು ಚುರುಕುಗೊಳಿಸಿದರು. ಈ ಪ್ರಯತ್ನಗಳು

ನಿರಂತರವಾಗಿ ನಡೆಯಲು ಗಾಂಧೀಜಿಯವರ ಸ್ಫೂರ್ತಿಯೇ ಕಾರಣವೆನ್ನಬಹುದು [4]. ಹೀಗೆ ಮೈಸೂರು ಸಂಸ್ಥಾನದಲ್ಲಿ ತಗಡೂರು ರಾಮಚಂದ್ರರಾಯರ ಸತತ ಪ್ರಯತ್ನದಿಂದ ಸ್ಫೂರ್ತಿ ಪಡೆದ ಕಾಂಗ್ರೆಸ್ ಪಕ್ಷದ ನಾಯಕರಾದ ಕೆ.ಟಿ.ಭಾಷ್ಯಂ, ವೆಂಕಟಪತಯ್ಯ ಮತ್ತು ಟಿ.ಟಿ.ಶರ್ಮ, ಪಿ.ಆರ್.ರಾಮಯ್ಯನವರ ಮುಂದಾಳತ್ವದಲ್ಲಿ ಬೆಂಗಳೂರಿನ ಬಸವನಗುಡಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶ ಮಾಡಿಕೊಡಲು 13–10–1933 ರಂದು ಮುಂತಾದವರು ಯತ್ನಿಸಿ ಯಶಸ್ವಿಯಾದರು [5].

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧೇಯಕ ಪರಿಷತ್‌ನಲ್ಲಿ 1936ರಲ್ಲಿ ಚರ್ಚಿಸಲಾದ ಮುಖ್ಯವಾದ ಗೊತ್ತುವಳಿಯ ಮೇರೆಗೆ ಮೈಸೂರು ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಮೇಲ್ವಿಚಾರಣೆಗೊಳಪಟ್ಟಿರುವ ಹಿಂದೂ ದೇವಾಲಯಗಳಿಗೆ ಅಸ್ಪೃಶ್ಯ ಬಂಧುಗಳು ಸಹ ಪೂಜೆ ಸಲ್ಲಿಸುವ ಅವಕಾಶ ಒದಗಿಸಲಾಯಿತು. ಈ ಹಿನ್ನಲೆಯಲ್ಲಿ ಪ್ರಭಾವಿತರಾದ ಚಿತ್ರದುರ್ಗ ಜಿಲ್ಲಾ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರಿನ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಸಿದ್ದಪ್ಪನವರ ಪಾತ್ರ ಹಿರಿದಾಗಿದ್ದು ಇವರು 1942 ರಲ್ಲಿ ತಾಲೂಕಿನಾದ್ಯಂತ ಹರಿಜನರಿಗೆ ದೇವಾಲಯ ಪ್ರವೇಶಾವಕಾಶವನ್ನು ದೊರಕಿಸಿಕೊಡುವ ದೃಷ್ಟಿಯಿಂದ ಅಖಿಲ ಮೈಸೂರು ಹರಿಜನ ದೇವಾಲಯ ಪ್ರವೇಶ ಸಮಿತಿಯ ಕಾರ್ಯನಿರ್ವಾಹಣಾಧಿಕಾರಿ ಸಭೆಯು ಪಿ.ಸುಬ್ಬರಾಮಯ್ಯಶೆಟ್ಟರ ನೇತೃತ್ವದಲ್ಲಿ 10 ಜನವರಿ 1944 ರಂದು ಮೈಸೂರಿನಲ್ಲಿ ಜರುಗಿತು. ಈ ಸಭೆಯಲ್ಲಿ ಕೈಗೊಂಡ ನಿರ್ಣಯವೆಂದರೆ ಸಮಿತಿಯ ಸದಸ್ಯರು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಹರಿಜನರಿಗೆ ಮೈಸೂರು ಸಂಸ್ಥಾನದಾದ್ಯಂತ ಇರುವ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡುವ ವಿಚಾರದಲ್ಲಿ ಸಾರ್ವಜನಿಕಾಭಿಪ್ರಾಯವನ್ನು ಸಂಗ್ರಹಿಸಬೇಕೆಂದು ತೀರ್ಮಾನಿಸಲಾಯಿತು [6]. ದಿನಾಂಕ 25–10–1945ರಂದು ಚೆಂಗಲರಾಯರೆಡ್ಡಿ, ಎಂ.ಸಿ.ಮಲ್ಲಪ್ಪ ಶ್ರೀಮತಿ ರಾಜೀವಬಾಯಿ ಮುಂತಾದವರು ಅಸ್ಪೃಶ್ಯರಿಗೆ ಅವಕಾಶವಿಲ್ಲದ ದೇವಾಲಯಗಳಿಗೆ ತಾವು ಸಹ ಪ್ರವೇಶ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು [7]. 1946 ರಲ್ಲಿ ತುಮಕೂರು ಜಿಲ್ಲಾ ಶಿವಗಂಗೆಯಲ್ಲಿರುವ ದೇವಾಲಯಗಳಿಗೆ ಹರಿಜನರು ಪ್ರವೇಶಿಸುವ ಅಧಿಕಾರವನ್ನು ಕೊಡುವುದಾಗಿ ಅಲ್ಲಿನ ಧರ್ಮದರ್ಶಿಗಳು ಘೋಷಣೆಯೊಂದನ್ನು ಹೊರಡಿಸಿದ್ದರು [8]. ಅಖಿಲ ಮೈಸೂರು ಹರಿಜನ ದೇವಾಲಯ ಪ್ರವೇಶ ಸಮಿತಿಯ ಅಧ್ಯಕ್ಷರಾದ ಪಿ.ಆರ್ ರಾಮಯ್ಯನವರ ಅಧ್ಯಕ್ಷತೆಯಲ್ಲಿ ದಿನಾಂಕ 13/9/1945 ರಂದು ಸಭೆ ನಡೆದವು. ಈ ಸಭೆಯಲ್ಲಿ ಕೈಗೊಂಡ ನಿರ್ಣಯವೆಂದರೆ ದಿನಾಂಕ 31–10–1945 ರ ಒಳಗಾಗಿ ಸಮಿತಿಯು ಮೈಸೂರು ಸಂಸ್ಥಾನದಲ್ಲೆಲ್ಲಾ ಪ್ರಚಾರ ನಡೆಸಿ ಹರಿಜನರಿಗೆ ದೇವಾಲಯಗಳಿಗೆ ಪ್ರವೇಶಕ್ಕೆ ಸಹಕಾರಿಯಾಗುವ ಕಾನೂನುಗಳನ್ನು ಮೈಸೂರು ಸಂಸ್ಥಾನದಾದ್ಯಂತ ಜಾರಿಗೆ ತರಬೇಕೆಂದು ಆಗ್ರಹ ಪಡಿಸುವ ನಿರ್ಣಯವೊಂದನ್ನು ಪಾಸು ಮಾಡಿತು. ಈ ಸಭೆಯಲ್ಲಿ ಹೆಚ್.ಸಿ.ದಾಸಪ್ಪ, ಯಶೋಧರ ದಾಸಪ್ಪ, ಪಾಮುಡಿ ಸುಬ್ಬರಾಮಶೆಟ್ಟಿ ಹಾಗೂ ಕೆ.ಪಟ್ಟಾಭಿರಾಮನ್ ಇವರುಗಳು ಭಾಗವಹಿಸಿದ್ದರು [9].

ಮೈಸೂರು ಸಂಸ್ಥಾನ ಅಸ್ಪೃಶ್ಯರ ದೇವಾಲಯ ಚಳವಳಿಯಲ್ಲೇ ಅತ್ಯಂತ ಮುಖ್ಯವಾದದ್ದು. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯಕ್ಕೆ ಪ್ರವೇಶಾವಕಾಶ ದೊರಕಿದ್ದು, 02–02–1947 ರಂದು ಅಂದು ಮೈಸೂರಿನ ಮಂತ್ರಿಗಳಾಗಿದ್ದ ಕೆ.ಸಿ.ರೆಡ್ಡಿಯವರ ನಾಯಕತ್ವದಲ್ಲಿ ಹೆಚ್ಚು ಜನ ಭಾಗವಹಿಸಿದ್ದು, ಅತ್ಯಂತ ಸ್ಮರಣೀಯ ಘಟನೆಯೆನ್ನಬಹುದು [10]. ಮೈಸೂರು ಸಂಸ್ಥಾನದಾದ್ಯಂತ ಇರುವ ಯಾವ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶಾವಕಾಶವಿಲ್ಲವೋ ಅಂತಹ ದೇವಾಲಯಗಳಿಗೆ, ಸರ್ಕಾರದ ಯಾವ ಮಂತ್ರಿಗಳೂ ಪ್ರವೇಶ ಮಾಡುವುದಿಲ್ಲವೆಂದು ಸಂಕಲ್ಪ ಮಾಡಿರುವ ವಿಚಾರವನ್ನು ಹಾಸನದಲ್ಲಿ ಹೆಚ್.ಸಿ.ದಾಸಪ್ಪನವರು ಬೃಹತ್ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣವೊಂದರಲ್ಲಿ ತಿಳಿಸಿದರು [11]. 1947ರ ಡಿಸೆಂಬರ್‌ನಲ್ಲಿ ಶಿಕ್ಷಣ ಮಂತ್ರಿಯಾಗಿದ್ದ ಚೆನ್ನಿಗರಾಮಯ್ಯನವರ ನೇತೃತ್ವದಲ್ಲಿ ಹರಿಜನರಿಗೆ ತುಮಕೂರು ಜಿಲ್ಲಾ ತಾವರೆಕೆರೆ ಈಶ್ವರ ದೇವಸ್ಥಾನ, ಬಂಡೆರಂಗನಾಥ ದೇವಸ್ಥಾನಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿ ಕೊಡಲಾಯಿತು [12].

ಯಳಂದೂರು ತಾಲೂಕಿನ ಪ್ರಸಿದ್ಧ ಪುರಾತನ ದೇವಾಲಯವಾದ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶವನ್ನು ಸವರ್ಣೀಯರು ಯಾವ ನಿರ್ಬಂಧವು ಇಲ್ಲದೆ ದಿನಾಂಕ 22/4/1948 ರಂದು ದೇವಾಲಯ ಪ್ರವೇಶ ಮಾಡಲಾಯಿತು [13]. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಗ್ರಾಮದ ಬಿ.ಆರ್ ಶಾಮಐತಾಳ್‌ರು 1948ರಲ್ಲಿ ತೀರ್ಥಹಳ್ಳಿಯ ರಾಮೇಶ್ವರ ಹಾಗೂ ಇನ್ನಿತರ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಟ್ಟರು [14]. ಮೈಸೂರು ಸಂಸ್ಥಾನದಾದ್ಯಂತ ಹರಿಜನರು ದೇವಾಲಯಗಳಿಗೆ ಪ್ರವೇಶಿಸುವ ಅವಕಾಶ ಪಡೆದುಕೊಂಡದನ್ನು ಮನಗಂಡ ಸವರ್ಣೀಯರು ಹರಿಜನರೊಂದಿಗೆ ದೇವಾಲಯಗಳಲ್ಲಿ ಒಟ್ಟಿಗೆ ಕಲೆತು ತೀರ್ಥಪ್ರಸಾದವನ್ನು ಸ್ವೀಕರಿಸಿ ಅವರ ಜೊತೆ ತಮ್ಮ ಸೋದರತ್ವವನ್ನು ಪ್ರದರ್ಶಿಸಿದರು. ಮುಜರಾಯಿ ಸಚಿವರಾಗಿದ್ದ ಪಾಮಡಿ ಸುಬ್ಬರಾಯಶೆಟ್ಟರ ಮುಖಂಡತ್ವದಲ್ಲಿ ಸೋಸಲೆಯ ಶ್ರೀ ಹೊನ್ನದೇವಿ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಿಗೆ ಸಾವಿರಕ್ಕಿಂತಲೂ ಹೆಚ್ಚು ಹರಿಜನರು ಪೂಜೆ ಸಲ್ಲಿಸಿದರು [15].

ದಿನಾಂಕ 17–01–1948ರಂದು ಕೆ.ಆರ್ ನಗರ ತಾಲೂಕಿನ ಚುಂಚನಕಟ್ಟೆ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶವನ್ನು ಮಾಡಿಕೊಡಲಾಯಿತು. ಹೆಚ್.ಸಿ.ದಾಸಪ್ಪನವರು ಅಲ್ಲಿನ ಸವರ್ಣೀಯ ಮುಖಂಡರೊಡನೆ ಮಾತುಕತೆ ನಡೆಸಿ ಅವರುಗಳು ಇದೇ ರೀತಿ ಹರಿಜನರೊಡನೆ ಬೆರೆತು ಇನ್ನುಳಿದ ದೇವಾಲಯಗಳಿಗೂ ಹರಿಜನರಿಗೆ ಪ್ರವೇಶಾವಕಾಶ ಕಲ್ಪಿಸಿಕೊಡಬೇಕೆಂದು ಸವರ್ಣೀಯರಿಗೆ ತಿಳಿಸಿದರು. ನೇರಳೆ ಮಾದಯ್ಯ, ನಂಜೇರಾಜ್ ಅರಸ್ ಮತ್ತು ಮೈಸೂರು ಜಿಲ್ಲಾಧಿಕಾರಿಗಳು ಹರಿಜನರೊಡಗೂಡಿ ಆ ದೇವಾಲಯಕ್ಕೆ ಪ್ರವೇಶಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು [16].

1947 ರ ಜನವರಿ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರು ದಂಡುಪ್ರದೇಶದಲ್ಲಿನ ದೇವಾಲಯಗಳು ಹರಿಜನರಿಗೆ ಪ್ರವೇಶಾವಕಾಶಕ್ಕಾಗಿ ತೆರೆಯಲ್ಪಟ್ಟವು. ಹಾಗೆಯೇ ಮುಜರಾಯಿ ಇಲಾಖೆಗೆ ಸೇರಿದ ಆಂಜನೇಯಸ್ವಾಮಿ, ಸೋಮೇಶ್ವರ ಮತ್ತು ಸುಬ್ರಹ್ಮಣ್ಯಸ್ವಾಮಿ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡಲಾಯಿತು [17]. 4–4–1948 ರಂದು ಗುಂಡ್ಲುಪೇಟೆಯ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ರಥೋತ್ಸವ ನಡೆಯಿತು. ಈ ಸಮಯದಲ್ಲಿ ಅಲ್ಲಿನ ಕಾಂಗ್ರೆಸ್ ಮುಖಂಡರಾಗಿದ್ದ ಜಿ.ಎಲ್ ಚಿಕ್ಕಸಿದ್ದಪ್ಪನವರು, ವೈ.ಜಿ ಶ್ರೀಕಂಠಚಾರ್ಯರವರುಗಳು ಅಲ್ಲಿನ ಸ್ಥಳೀಯ ಸವರ್ಣೀಯ ಜನಗಳ ಸಹಕಾರದಿಂದ ಹರಿಜನರುಗಳಿಗೆ ದೇವಾಲಯ ಪ್ರವೇಶಾವಕಾಶವನ್ನು ದೊರಕಿಸಿಕೊಟ್ಟರು. ಸರ್ಕಾರವು ಹರಿಜನರುಗಳನ್ನು ದೇವಾಲಯಗಳಿಗೆ ಮುಕ್ತವಾಗಿ ಪ್ರವೇಶವನ್ನು ಮಾಡುವ ಶಾಸನವನ್ನು ಜಾರಿಗೆ ತಂದಿದ್ದರೂ ಸಹ ಸವರ್ಣೀಯರುಗಳು ಅವರುಗಳಿಗೆ ದೇವಾಲಯವನ್ನು ಪ್ರವೇಶ ಮಾಡಲು ನಿರಾಕರಿಸುತ್ತಿದ್ದರಿಂದ ಮೈಸೂರು ಸಂಸ್ಥಾನದ ಬಹುತೇಕ

ಭಾಗಗಳಲ್ಲಿ ಸವರ್ಣೀಯರ ಮನವೊಲಿಸಿ ಹರಿಜನರಿಗೆ ಮುಕ್ತ ಅವಕಾಶವನ್ನು ಮಾಡಿಕೊಡಲಾಯಿತು [18].

ಮೈಸೂರು ಸಂಸ್ಥಾನದ ಹಲವು ಕಾಂಗ್ರೆಸ್ ನಾಯಕರುಗಳ ಹೋರಾಟದ ಫಲವಾಗಿ 1948 ರ ಜನವರಿ ತಿಂಗಳಲ್ಲಿ ಶಾಸನಸಭೆಯಲ್ಲಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶದ ಮಸೂದೆಗೆ ಅಂಗೀಕಾರ ದೊರೆಯಿತು. ಅನಂತರ ಅದು ಮಹಾರಾಜರಿಂದ ಅಂಗೀಕೃತವಾಗಿ ದಿನಾಂಕ 11–2–1948 ರಂದು ಶಾಸನ ರೂಪದಲ್ಲಿ ಜಾರಿಗೆ ಬಂದಿತು [19]. ಇದೇ ಸಮಯದಲ್ಲಿ ಮೈಸೂರಿನ ಮಂಡಿಮೊಹಲ್ಲಾದಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶ ದೊರಕಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಎಸ್.ರಂಗರಾಮಯ್ಯ, ಪಾಲಹಳ್ಳಿ ಸೀತಾರಾಮಯ್ಯ, ಎನ್.ಎಸ್.ಹಿರಣಯ್ಯ ಮುಂತಾದವರು ಶ್ರಮಿಸಿದರು [20]. ದಿನಾಂಕ 10–3–1948 ರಂದು ಬೆಂಗಳೂರಿನ ಕಾಶಿ ವಿಶ್ವನಾಥಸ್ವಾಮಿ ದೇವಾಲಯಕ್ಕೆ ಹಾಗೂ 25–3–1948 ರಂದು ತಿರುಮಕೂಡಲು ನರಸೀಪುರದಲ್ಲಿ ನಡೆದ ಶ್ರೀ ಗುಂಜಾ ನರಸಿಂಹದೇವರ ರಥೋತ್ಸವ ಸಂದರ್ಭದಲ್ಲಿ ಹರಿಜನರುಗಳಿಗೆ ಪ್ರವೇಶಾವಕಾಶ ದೊರಕಿಸಿ ಕೊಡಲಾಯಿತು. ಈ ಸಂದರ್ಭದಲ್ಲಿ ಎಸ್.ಎಂ.ಸಿದ್ದಯ್ಯ ಮತ್ತು ಎನ್.ರಾಚಯ್ಯನವರು ಭಾಗವಹಿಸಿದ್ದರು [21]. ಹೀಗೆ ಮೈಸೂರು ಪ್ರಾಂತ್ಯದ ಮೇಲ್ವರ್ಗದವರು ಗಾಂಧೀಜಿಯವರ ಸಮಾಜ ಸುಧಾರಣಾ ಕಾರ್ಯಗಳಿಂದ ಪ್ರಭಾವಿತರಾಗಿ ಅಸ್ಪೃಶ್ಯತಾ ನಿವಾರಣೆ ಹಾಗೂ ಹರಿಜನೋದ್ಧಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಿದರರು.

## ಉಲ್ಲೇಖಗಳು


1. ನಾಗರತ್ನಮ್ಮ ಎಸ್, 'ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ', ದೇಶಿ ಪ್ರಕಾಶನ, ಬೆಂಗಳೂರು, 2009.
2. ಸೂರ್ಯನಾಥ್ ಕಾಮತ್, 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು (ಸಂ)–2', ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1998.
3. ಜೋಯಿಸ್,ಎಂ.ಎನ್(ಸಂ), ಪೂರ್ವೋಕ್ತ, 1974,
4. ವೇಮಗಲ್ ಸೋಮಶೇಖರ್, 'ನಂಜನಗೂಡಿನಲ್ಲಿ ಮಹಾತ್ಮಗಾಂಧೀಜಿ', ಜನಪದ ಮಾಸಿಕ ಪತ್ರಿಕೆ 7 ಅಕ್ಟೋಬರ್, 2011.
5. ಸೂರ್ಯನಾಥ್ ಕಾಮತ್(ಸಂ), 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ–2', ಪುಟ–760.
6. ಅಗರಂ ರಂಗಯ್ಯ(ಸಂ), ಸಾಧ್ವಿ ಪತ್ರಿಕೆ, 11–01–1944.
7. ಅದೇ, 26–10–1945.
8. ಅದೇ, 21–02–1946.
9. ಅದೇ, 14–09–1945.
10. ಅದೇ, 02–02–1947.
11. ಅದೇ, 05–11–1947.
12. ಸೂರ್ಯನಾಥ್ ಕಾಮತ್(ಸಂ), ಪೂರ್ವೋಕ್ತ,
13. ಸಾಧ್ವಿ ಪತ್ರಿಕೆ, 01–05–1948.
14. ಸೂರ್ಯನಾಥ್ ಕಾಮತ್(ಸಂ), ಪೂರ್ವೋಕ್ತ, ಪುಟ–612.
15. ಸಾಧ್ವಿ ಪತ್ರಿಕೆ, 15–05–1948.
16. ಅದೇ, 18–01–1948.
17. ಅದೇ, 05–02–1947.
18. ಅದೇ, 07–04–1948.
19. ಅದೇ, 18–02–1948.
20. ಅದೇ, 06–03–1948.
21. ಅದೇ, 27–03–1948.